ಆಂಧ್ರಪ್ರದೇಶ ಜಿಲ್ಲೆಯ ಕೊಲಕಲೂರಿನವರಾದ ಸತ್ಯವತಿ ಪಿ. ಓದಿದ್ದು ಇಂಗ್ಲಿಷ್ ಸಾಹಿತ್ಯ. ಆದರೆ ತೆಲುಗು ಭಾಷೆಯಲ್ಲಿ ಕಥೆಗಳನ್ನು ಬರೆದವರು. ಪಿತೃ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗಿರುವ ಸಮಸ್ಯೆಗಳಿಗಿಂತ ತಾವೇ ಮೇಲೆದುಕೊಳ್ಳುವ ಸಮಸ್ಯೆಗಳು ಹೆಚ್ಚಾದಲ್ಲಿ ಅವರ ಮೇಲೆ ಸಮಾಜ ಹೇರುವ ನಿರ್ಬಂಧಗಳು, ಅವಮಾನಗಳಿಗೆ ಕೊನೆಯೇ ಇರುವುದಿಲ್ಲ. ಇದನ್ನು ಸಮರ್ಥವಾಗಿ ಎದುರುಗೊಳ್ಳಬೇಕಾದರೆ ಸಮಸ್ಯೆಯ ಸ್ವರೂಪದ ಅರಿವು ಮುಖ್ಯ ಎಂಬುದನ್ನು ಸಾರುವ ಕಥೆಗಳನ್ನು ಅವರು ಬರೆದಿದ್ದಾರೆ. 'ಮರ್ರಿನೀಡ', 'ಸತ್ಯವತಿ ಕಥಲು', 'ಇಲ್ಲಲಕಗಾನೇ', 'ಮಂತ್ರನಗರಿ' ಎಂಬ ಕಥಾಸಂಕಲನಗಳನ್ನು ಹಾಗೂ 'ಪಡುಚುದನಂ ರೈಲುಬಂಡಿ', 'ಗೊಡುಗು', 'ಆ ತಪ್ಪು ನೀದಿಕಾದು' ಎಂಬ ಕಾದಂಬರಿಗಳನ್ನು ಬರೆದಿದ್ದಾರೆ.

ಹೆಣ ಒಮ್ಮೆ ಮುಟ್ಟಿ ನೋಡಬೇಕು ಅಂತ ಸುಬ್ಬಾರಾವನಿಗೆ ಅನಿಸುತ್ತಿತ್ತು. ಮಂಚದಿಂದ ಕೆಳಗಿಳಿಸುವಾಗ ಕಾಲು ಹಿಡಿದಿದ್ದನಾದರೂ ಕಾಲಿನ ಮೇಲೆ ಸೀರೆಯ ನೆರಿಗೆ ಇತ್ತು. ಅವಳ ದೇಹ ಹೀಗೆ ಸುಣ್ಣವಾಗಿ ಹೇಗೆ ಬದಲಾಯಿತು? ಅದು ಸುಣ್ಣವಾ ಅಥವಾ ಮತ್ತೇನಾದರೂ ಇರಬಹುದಾ? ಅನ್ನುವ ಕುತೂಹಲ ಅವನಿಗೆ. ಆದರೆ ಆ ದೇಹ ಅವನ ಗೆಳೆಯನ ಹೆಂಡತಿಯದು. ಎಷ್ಟಾದರೂ ಅದು ಅವನ ವಸ್ತು. ಹೆಣವಾದರೂ ಅದರ ಮೇಲಿನ ಅಧಿಕಾರ ಅವನದೇ ಅಲ್ಲವೇ! ಮುಟ್ಟಿದರೆ ಅವನೇನಾದರೂ ಅಂದರೆ?

ಯಾರೋ ಸಲಿಗೆಯಿಂದ ಅಡುಗೆ ಮನೆಗೆ ನುಗ್ಗಿ ಕಾಫೀ ಮಾಡಿ ಸೂರ್ಯಾರಾವನಿಗೆ ಪುಸಲಾಯಿಸಿ ಕೊಟ್ಟರು. ಹೆಣದ ಬಳಿ ಕುಡಿಯಲು ಇಷ್ಟವಿಲ್ಲದೇ ಆತ ಪಕ್ಕದ ಕೋಣೆಗೆ ಹೋದ. ಇದೇ ಸರಿಯಾದ ಸಮಯ ಅಂದುಕೊಂಡು ಅವಳ ಕಾಲಿನಿಂದ ಸಣ್ಣ ಚೂರೊಂದನ್ನು ಚಿವುಟಿ ಸುಬ್ಬಾರಾವು ಜೇಬಿಗೆ ಇಳಿಸಿ ಫೋನು ಮಾಡಲು ಹೋದ.

'ಮಾಮಾಳನ್ನ ನಾನು ಬರುವವರೆಗೂ ಇರಿಸಿ. ಯಾವುದೋ ಒಂದು ಫ್ಲಯಿಟ್ ನೋಡಿಕೊಂಡು ಹೇಗೋ ಬಂದು ಇಳಿತೇನೆ. ಓಕೆ?' ಅಂದಳು ಸೂರ್ಯಾರಾವನ ಮಗಳು ನ್ಯೂಜೆರ್ಸಿಯಿಂದ.

ಮಗ ಫೋನಲ್ಲೇ ಅತ್ತುಬಿಟ್ಟ. ಆತ ಇಂಡಿಯಾಗೆ ಬಂದರೆ ಮತ್ತೆ ವಿಸಾ ರೆನ್ಯೂ ಆಗುವುದು ಕಷ್ಟ. 'ಮಾಮಾ ಯಾಕೆ ಹೀಗೆ ಹೋಗಿಬಿಟ್ಟಳು ಅಂಕಲ್ ವಾಟ್ ಹಾಪೆನ್ಡ್' ಎಂದು ಹತಾಶೆಯಿಂದ ಕೇಳಿದ.

ಅವನನ್ನು ಹೇಗಾದರೂ ಮಾಡಿ ಸ್ಟೇಟ್ಸ್ ಗೆ ಕಳಿಸಬೇಕೆಂದು ಅನೂರಾಧ ಹಟ ಹಿಡಿದಿದ್ದಳು. ಮುದ್ದು ಮಾಡಿ, ಭಯ ಹೇಳಿ ಹೇಗೋ ಓದಿಸಿ ಸಾಕಷ್ಟು ಹಣ ಖರ್ಚು ಮಾಡಿ ಅವನನ್ನು ಸ್ಟೇಟ್ಸ್ ಗೆ ಅಟ್ಟಿದವಳೂ ಅವಳೇ. ಬ್ಯಾಂಕಿನಲ್ಲಿ ಎಲ್ಲರೂ ಅವಳನ್ನು ಗೌರವದಿಂದ ಕಾಣುತ್ತಾರೆ. 'ನಿನ್ನ ಮಕ್ಕಳು ರತ್ನಗಳೇ ಸರಿ' ಎಂದು ಹೊಗಳುತ್ತಾರೆ. ಎಲ್ಲರೂ ಹಾಗೆ ಹೊಗಳಬೇಕೆನ್ನುವುದೇ ಅವಳ ಆಸೆ. ಅವಳ ಆಸೆ ಫಲಿಸಿತು. 'ಬಟ್ ಫರ್ ಮಾಮಾ ಹಿ ಕುಡನ್ಟ್ ಹ್ಯಾವ್ ಮೇಡ್ ಇಟ್. ಈಗ ಅವನು ಮಾಮಾಳನ್ನು ನೋಡಲು ಸಾಧ್ಯವಿಲ್ಲ. ಹಿ ಕಾನ್ಟ್ ಮೇಕ್ ಇಟ್'.

'ಬಾಡಿಯನ್ನು ಐಸ್‌ನಲ್ಲಿ ಇಡಬೇಕಾಗುತ್ತದೇನೋ – ಹುಡುಗಿ ಬರುವ ತನಕ ಹೀಗೇ ಇಟ್ಟರೆ ಕೆಟ್ಟು ಹೋಗುತ್ತದೆ.' ಯಾರೋ ಅಂದರು.

'ಇದು ಮಾಮೂಲಿ ಹೆಣ ಅಲ್ಲ. ಸುಣ್ಣದ ಹಾಗಿದೆ. ಐಸ್ ಮೇಲಿಟ್ಟರೆ ಕರುಗುವುದಿಲ್ಲವಾ?' ಮತ್ತಾರೋ ಅಂದರು.

'ಹೋಗಲಿ. ಹೆಣದ ಸುತ್ತಾ ಯಾವುದಾದರೂ ಔಷಧಿ ಹಾಕಬಹುದಾ ನೋಡಿ' ಇನ್ನೊಬ್ಬರು ಸಲಹೆ ಕೊಟ್ಟರು. ಫೋನು ಮಾಡುವುದು ಮುಗಿಸಿದ ಸುಬ್ಬಾರಾವು ದಾರಿಯಲ್ಲಿದ್ದ ತನ್ನ ಮನೆಗೆ ಹೋಗಿ ತಿಂಡಿ ತಿಂದು ಕಾಫಿ ಕುಡಿದು ಜೇಬಿನಲ್ಲಿದ್ದ ಮಾತ್ರೆಯ ಥರದ ಚೂರನ್ನು ಮಗಳ ಕೈಗಿಟ್ಟು ಅನೂರಾಧಾಳ ಸಾವಿನ ಮಿಸ್ಟರಿ ಹೇಳಿದ. ಆಕೆ ಥಟ್ಟನೆ ಆ ಚೂರನ್ನು ಪರ್ಸಿಗೆ ಹಾಕಿಕೊಂಡು ಹತ್ತಿರದಲ್ಲೇ ಇದ್ದ ಲ್ಯಾಬಿಗೆ ಓಡಿದಳು. ಲ್ಯಾಬಿನವರು ಅದನ್ನು ಪರೀಕ್ಷೆ ಮಾಡಿ, ಅದು ತಲೆ ನೋವಿಗೆ ನುಂಗುವ ಆಸ್ಪ್ರಿನ್ ಮಾತ್ರೆ ಅಂದರು.

'ಅಪ್ಪಾ ನಾನೂ ಅಲ್ಲಿಗೆ ಬರತೀನಿ' ಅಂದು ಲೆನ್ಸ್ ಹಿಡಿದು ಸುಬ್ಬಾರಾವನ ಮಗಳು ಸೂರ್ಯಾರಾವನ ಮನೆಗೆ ಬಂದಳು. ಅವಳ ಹೆಸರು ಸುಶೀಲ. ಆ ಬೀದಿಯಲ್ಲಿ ಅನೂರಾಧಾಳ ಬಗೆಗೆ ಗೊತ್ತಿರದವರು